(೨) ಕಾರ್ಮಿಕ ಕಲ್ಯಾಣ ನಿಧಿಯಿಂದ ಕೃಷಿ ಕಾರ್ಮಿಕರ ಹಾಗೂ ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೊಡಲಾಗುತ್ತಿದೆ.

(೩) ಕೇಂದ್ರ ಸರ್ಕಾರದ ಯೋಜನಾ ನೆರವಿನಿಂದ ಅಸಂಘಟಿತ ಕೆಲಸಗಾರರಿಗೆ ಸಂಘಟಿತ ಗೊಳ್ಳಲು ಮತ್ತು ಯೋಗ್ಯವಾದ ಶಿಕ್ಷಣವನ್ನು ನೀಡುವುದಕ್ಕೆ ರಾಜ್ಯದ ೭೫ ಮುಖ್ಯ ತಾಲ್ಲೂಕುಗಳನ್ನು ಆರಿಸಿಕೊಳ್ಳಲಾಗಿದೆ.

(೪) ವ್ಯವಸಾಯ ಕ್ಷೇತ್ರದಲ್ಲಿ ಬೀಡಿ ಆಗರಬತ್ತಿ ಮುಂತಾದ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅಪಘಾತದ ಸಂದರ್ಭದಲ್ಲಿ ಮರಣ ಹೊಂದಿದರೆ ಅವರಿಗೆ ಆರ್ಥಿಕ ಪರಿಹಾರವನ್ನು ನೀಡಲು ಈಗಾಗಲೇ ರಾಜ್ಯದಲ್ಲಿ ''ಆಶ್ರಾಕಿರಣವೆಂಬ ಯೋಜನೆಯು ಆಚರಣೆಯಲ್ಲಿದೆ''.

ಬಿದಿರಿ ಕರಕುಶಲ ವಸ್ತುಗಳ ಮಾರಾಟಕ್ಕಾಗಿ ಮಾರಾಟ ಮಳಿಗೆಗಳ ಸಮುಚ್ಚಯವನ್ನು ನಿರ್ಮಿಸುವ ಕುರಿತು.

೯೬೪. ಶ್ರೀ ಮಹಮದ್ ಲೈಕುದ್ದೀನ್ (ಬೀದರ್).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬಿದಿರಿ ಕರಕುಶಲಗಾರರಿಗಾಗಿ ಬೀದರ್‌ನಲ್ಲಿ ಮಾರಾಟ ಮಳಿಗೆಗಳ ಸಮುಚ್ಚಯವನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

ಆ) ಬೀದರ್ ಮತ್ತು ಬೆಂಗಳೂರಿನಲ್ಲಿ ಬಿದಿರಿ ಕರಕುಶಲ ವಸ್ತುಗಳನ್ನು ಗ್ರಾಹಕರಿಗೆ ಹಾಗೂ ವಿದೇಶೀ ಪ್ರವಾಸಿಗರಿಗೆ ನೇರವಾಗಿ ಮಾರಾಟ ಮಾಡಲು ಪ್ರತ್ಯೇಕ ಮಾರುಕಟ್ಟೆ ಇದೆಯೇ?

ಇ) ಹಾಗಿಲ್ಲದಿದ್ದ ಪಕ್ಷದಲ್ಲಿ ಸರ್ಕಾರವು ಬಿದಿರಿ ಕರಕುಶಲ ವಸ್ತುಗಳ ನೇರ ಮಾರಾಟಕ್ಕಾಗಿ ಇಂತಹ ಮಾರಾಟ ಮಳಿಗೆಗಳ ಸಮುಚ್ಚಯವನ್ನು ಪ್ರಾರಂಭಿಸಿ ಬಿದಿರು ಕರಕುಶಲಗಾರರಿಗೆ ಮಧ್ಯವರ್ತಿಗಳಿಂದ ಆಗುತ್ತಿರುವ ಶೋಷಣೆಯನ್ನು ತಪ್ಪಿಸುವುದೇ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು).—

ಅ) ಇಲ್ಲ.

ಆ) ಇಲ್ಲ. ಆದರೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ವಿವಿಧ ಸ್ಥಳಗಳಲ್ಲಿ ಹೊಂದಿರುವ ತನ್ನ ಮಾರಾಟ ಮಳಿಗೆಗಳ ಮೂಲಕ ಗ್ರಾಹಕರಿಗೆ ಹಾಗೂ ವಿದೇಶಿ ಪ್ರವಾಸಿಗರಿಗೆ ಬಿದಿರಿ ಕರಕುಶಲ ವಸ್ತುಗಳ ನೇರ ಮಾರಾಟವನ್ನು ಮಾಡುತ್ತಿದೆ.

ಇ) ಬಿದಿರಿ ಕರಕುಶಲ ವಸ್ತುಗಳನ್ನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡುತ್ತಿರುವ ಕಾರಣ ಮಾರಾಟ ಮಳಿಗೆಗಳ ಸಮುಚ್ಚಯವನ್ನು ಪ್ರಾರಂಭಿಸುವ ಯೋಚನೆ ಇಲ್ಲ. ಮಧ್ಯವರ್ತಿಗಳಿಂದ ಆಗುತ್ತಿರುವ ಶೋಷಣೆಯನ್ನು ತಪ್ಪಿಸುವ ಉದ್ದೇಶದಿಂದ ಬಿದಿರಿ ಕುಶಲ ಕರ್ಮಿಗಳಿಗೆ ಅಗತ್ಯವಿರುವ ಕಚ್ಚಾ ವಸ್ತುಗಳನ್ನು ನ್ಯಾಯಬೆಲೆಯಲ್ಲಿ ಸರಬರಾಜು ಮಾಡುವ ಹಾಗೂ ತಯಾರು ಮಾಡಿದ ವಸ್ತುಗಳನ್ನು ಬಿದಿರಿ ಕುಶಲಕರ್ಮಿಗಳಿಂದಲೇ ನೇರವಾಗಿ ಪಡೆದುಕೊಂಡು ತನ್ನ ಮಾರಾಟ ಮಳಿಗೆಗಳ ಮೂಲಕ ಮಾರುವ ಯೋಜನೆಯೊಂದನ್ನು ನಿಗಮವು ಅಳವಡಿಸಿಕೊಂಡಿದೆ. ಎಲ್ಲಾ ಬಿದಿರಿ ಕುಶಲಕರ್ಮಿಗಳಿಂದ ನಿಗಮವು ಬಿದಿರಿ ಕರಕುಶಲ ವಸ್ತುಗಳನ್ನು ಕೊಂಡುಕೊಳ್ಳುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಉಪಾಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸಲಿರುವ ಪ್ರಶ್ನೆಗಳು—೨೭ನೇ ಪಟ್ಟಿ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು—೨೭ನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.